ಇಲ್ಲದಂತೆ ಹಣ ಬಿಡುಗಡೆ ಮಾಡಲಾಗಿದೆ. ಆದರೆ ನಮ್ಮ ಉತ್ತರ ಕರ್ನಾಟಕದ ಮಹಾನಗರಸಭೆಗಳಿಗೆ ಹಣ ಬಿಡುಗಡೆ ಮಾಡಲು ತಾರತಮ್ಯ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕರ್ನಾಟಕದವರೇ. ಅವರೂ ಕೂಡ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು :— ಆದಷ್ಟು ಬೇಗ ಹಣ ಬಿಡುಗಡೆ ಮಾಡಿಸಿಕೊಡುತ್ತಾರೆ ಬಿಡಿ.

(ಐ) ಹಳೆಯ ಪಿ.ಪಿ. ಸೆಟ್‌ಗಳಿಗೆ ಮೀಟರ್ ಅಳವಡಿಸಿ ಹಣ ವಸೂಲಿ ಮಾಡುತ್ತಿರುವುದರ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) :— ಮಾನ್ಯ ಅಧ್ಯಕ್ಷರೆ, ರೈತರ ಪಂಪುಸೆಟ್ಟುಗಳಿಗೆ ಮೀಟರನ್ನು ಅಳವಡಿಸಬೇಕೆಂಬ ವಿಚಾರ ಬಂದಿದ್ದಾಗ ಅದರ ಬಗ್ಗೆ ಪ್ರತಿಭಟನೆ ಬಂದಿದ್ದರಿಂದ ಆ ಕೆಲಸವನ್ನು ಕೈಬಿಡಲಾಗಿತ್ತು. ಆದರೆ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವ ಯೋಜನೆಯಲ್ಲಿ ರೈತರಿಂದ ಮತ್ತು ಸ್ವಯಂ ಆರ್ಥಿಕ ಯೋಜನೆಯಲ್ಲಿ ಹಣವನ್ನು ತುಂಬಿದಂಥ ರೈತರಿಂದ, ಹಾಗೂ ಹೊಸದಾಗಿ ಅರ್ಜಿ ಕೊಟ್ಟಂಥ ರೈತರಿಂದ 950 ರೂ.ಗಳನ್ನು ಕೆ.ಇ.ಬಿ. ನವರು ವಸೂಲಿ ಮಾಡುತ್ತಿದ್ದಾರೆ. ಇದು ಸದನದ ನಿರ್ಣಯಕ್ಕೆ ವಿರೋಧವಾಗಿದೆ. ಆ ರೀತಿ ವಸೂಲಿ ಮಾಡಿದಂಥ ಹಣವನ್ನು ವಾಪಸ್ ಕೊಡಬೇಕು. ಇನ್ನು ಮುಂದೆ ಆ ರೀತಿ ವಸೂಲಿ ಮಾಡದಂತೆ ಆದೇಶವನ್ನು ಹೊರಡಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಹೋದ ವರ್ಷವೇ ಹಳೆಯ ಐ.ಪಿ. ಸೆಟ್ಟುಗಳಿಗೆ ಮೀಟರ್ ಗಳನ್ನು ಅಳವಡಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಅದರ ಬಗ್ಗೆ ಎಲ್ಲಾ ಕಡೆಗಳಿಂದ ವಿರೋಧ ವ್ಯಕ್ತವಾದಾಗ ಮುಖ್ಯಮಂತ್ರಿಗಳು ಇದನ್ನು ಕೈಬಿಟ್ಟಿದ್ದರು. ಹಳೆಯದಕ್ಕೆ ನಾವು ಮೀಟರ್ ಗಳನ್ನು ಅಳವಡಿಸಿ ಹಣವನ್ನು ವಸೂಲಿ ಮಾಡುತ್ತಿಲ್ಲ. ಆದರೆ ಇವರು ಹೊಸ ಸಂಪರ್ಕದ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ ಹಿಂದೆ ನಾವು ಹೊಸ ಸಂಪರ್ಕದ ಬಗ್ಗೆ ಯಾವುದೇ ಭರವಸೆಯನ್ನು ಕೊಟ್ಟಿರಲಿಲ್ಲ. ಹೊಸ ಸಂಪರ್ಕದವರಿಗೆ ಮೀಟರ್ ಗಳನ್ನು ಅಳವಡಿಸುತ್ತಿದ್ದೇವೆ. ಆದರೆ ಸದನದಲ್ಲಿ ಹಿಂದೆ ಕೊಟ್ಟ ಆಶ್ವಾಸನೆಯಂತೆ ಹಳೆಯ ಐ.ಪಿ. ಸೆಟ್ ಗಳಿಗೆ ನಾನೇನೂ ಮಾಡಲು ಹೋಗಿಲ್ಲ. ಒಂದು ವೇಳೆ ಸದನದಲ್ಲಿ ಆ ರೀತಿ ಭರವಸೆ ಕೊಟ್ಟರೆ ಎಲ್ಲರಿಗೂ ಹಣವನ್ನು ವಾಪಸ್ ಕೊಡುವ ವ್ಯವಸ್ಥೆ ಮಾಡುತ್ತೇವೆ.